# ಕರ್ನಾಟಕ ವಿಧಾನ ಪರಿಷತ್ತು

**ಲಘು ಪ್ರಕಟಣೆ ಭಾಗ –2**

**(ಸಾಂಸದಿಕ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ಸಾಮಾನ್ಯ ಮಾಹಿತಿ)**

**ಸೋಮವಾರ, ದಿನಾಂಕ:25ನೇ ಮೇ, 2026**

**ಸಂಖ್ಯೆ: 14**

ಕರ್ನಾಟಕ ಲೋಕಾಯುಕ್ತ ಕಾಯಿದೆ 1985ರ ನಿಯಮ 7ನ್ನು ತಿದ್ದುಪಡಿ ಮಾಡಿ "ಸೆಕ್ಷನ್ 22ರ ಅಡಿಯಲ್ಲಿ ಆಸ್ತಿ ಮತ್ತು ದಾಯಿತ್ವಗಳ ಹೇಳಿಕೆಯನ್ನು ನಮೂನೆ–IVರಲ್ಲಿ ಕರ್ನಾಟಕ ಲೋಕಾಯುಕ್ತ ಜಾಲತಾಣದ ಮೂಲಕ ಸಲ್ಲಿಸತಕ್ಕದ್ದು" ಎಂದು ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ/55/ ಸೇಲೋಯು/2021, ದಿನಾಂಕ: 06.12.2021ರ ಅನ್ವಯ ಶಾಸಕಾಂಗದ ಸದಸ್ಯರು ಆನ್‌ಲೈನ್ ಮುಖಾಂತರ ಆಸ್ತಿ–ದಾಯಿತ್ವ ಪಟ್ಟಿಯ ಮಾಹಿತಿಯನ್ನು ಸಲ್ಲಿಸಲು ಎನ್.ಐ.ಸಿ.(ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ) ರವರು ಅಭಿವೃದ್ಧಿ ಪಡಿಸಿದ ತಂತ್ರಾಂಶವನ್ನು ದಿನಾಂಕ:18.04.2026ರಂದು ಲೋಕಾರ್ಪಣೆ ಮಾಡಿದ್ದು, ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರು 2025–26ನೇ ಸಾಲಿನ ತಮ್ಮ ಮತ್ತು ತಮ್ಮ ಕುಟುಂಬದ ಸದಸ್ಯರ ಆಸ್ತಿ ಮತ್ತು ದಾಯಿತ್ವಗಳ ಪಟ್ಟಿಯನ್ನು ಕರ್ನಾಟಕ ಲೋಕಾಯುಕ್ತ https://Lokayukta.karnataka.gov.in/lokassets ಜಾಲತಾಣದ ಮೂಲಕ ನಿಗದಿತ ಅವಧಿಯಾದ 30ನೇ ಜೂನ್ 2026 ರೊಳಗಾಗಿ ಕಡ್ಡಾಯವಾಗಿ ಸಲ್ಲಿಸುವಂತೆ ನಿಬಂಧಕರು, ಲೋಕಾಯುಕ್ತವರು ತಿಳಿಸಿರುತ್ತಾರೆ.

ಈ ಸಂಬಂಧ ಮಾನ್ಯ ಸದಸ್ಯರಿಗೆ ಮತ್ತು ಅವರ ಆಪ್ತ ಸಹಾಯಕರುಗಳಿಗೆ ಎನ್.ಐ.ಸಿ ರವರು ವಿಕಾಸ ಸೌಧದಲ್ಲಿರುವ 4ನೇ ಮಹಡಿಯ ಕೊಠಡಿ ಸಂಖ್ಯೆ 419 ರಲ್ಲಿ ದಿನಾಂಕ:03.06.2026 ರಿಂದ 05.06.2026 ರವರೆಗೆ 3 ದಿನಗಳ ಕಾಲ ಅಪರಾಹ್ನ 2 ಗಂಟೆಯಿಂದ 5 ಗಂಟೆಯವರೆಗೆ ಪ್ರಾತ್ಯಕ್ಷತೆಯನ್ನು ಲೋಕಾಯುಕ್ತ ಕಛೇರಿಯ ವತಿಯಿಂದ ಹಮ್ಮಿಕೊಳ್ಳಲಾಗಿರುತ್ತದೆ. ಈ ಪ್ರಾತ್ಯಕ್ಷತೆಗೆ ಮಾನ್ಯ ಸದಸ್ಯರು ತಮ್ಮ ಒಬ್ಬ ಆಪ್ತ ಸಹಾಯಕರೊಂದಿಗೆ ತಮಗೆ ಅನುಕೂಲವಾದ ಯಾವುದಾದರು ಒಂದು ದಿನ ಕಡ್ಡಾಯವಾಗಿ ಹಾಜರಾಗಲು ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರುರವರು ಕೋರಿದ್ದು, ಈ ಕಾರ್ಯಾಗಾರದ ಸದುಪಯೋಗ ಪಡೆದುಕೊಳ್ಳುವಂತೆ ಕೋರಲಾಗಿದೆ.

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ

ವಿಧಾನ ಪರಿಷತ್ತಿನ ಎಲ್ಲಾ ಮಾನ್ಯ ಶಾಸಕರುಗಳಿಗೆ.